ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ವಿವಿಪ/ಅಸಾಮಾನ್ಯ/87/2023–24 ದಿನಾಂಕ:17.07.2023.

ಗೆ,
ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ,

ವಿಷಯ: ದಿನಾಂಕ. 12.07.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 12.07.2023 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2 ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬೆಂ.ನ.ವಿ/ವಿವಿಪ/ಅಸಾಮಾನ್ಯ/ 87 /2023–24 ದಿನಾಂಕ: 14.07.2023.

ದಿನಾಂಕ 12.07.2023 ರಂದು ಅಪರಾಹ್ನ 03.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ | ಸಭಾಧ್ಯಕ್ಷರು |
| 2. | ಶ್ರೀ ಎಸ್ ಕೇಶವ ಪ್ರಸಾದ್ | ಸದಸ್ಯರು |
| 3. | ಶ್ರೀ ರಮೇಶ್ ನಾರಾಯಣ್ ರಾವ್ | ಸದಸ್ಯರು |
| 4. | ಡಾ. ಪ್ರೇಮ | ಸದಸ್ಯರು |
| 5. | ಪ್ರೊ. ಸುಮಯಾ ಫಾತಿಮಾ | ಸದಸ್ಯರು |
| 6. | ಡಾ. ಎಂ. ಆರ್. ಲಕ್ಷ್ಮೀನಾರಾಯಣ | ಸದಸ್ಯರು |
| 7. | ಡಾ. ಎಲಿಝಾಬೆತ್ ಜಾಸ್ಮಿನ್ | ಸದಸ್ಯರು |
| 8. | ಶ್ರೀಮತಿ. ಡಿ. ಆರ್ ಸುಧಾ | ಸದಸ್ಯರು |
| 9. | ಡಾ. ಎಸ್. ಎನ್. ವೆಂಕಟೇಶ್ | ಸದಸ್ಯರು |
| 10. | ಡಾ. ಸಿ. ಎಂ. ನವೀನ್ ಕುಮಾರ್ | ಸದಸ್ಯರು |
| 11. | ಡಾ. ಕೆ ಶಿವಶಂಕರ | ಸದಸ್ಯರು |
| 12. | ಡಾ. ಎಂ. ಪಾಂಡುರಂಗಪ್ಪ | ಸದಸ್ಯರು |
| 13. | ಡಾ. ಪಿ.ಆರ್. ಚೇತನ | ಸದಸ್ಯರು |
| 14. | ಡಾ. ಎನ್. ನರಸಿಂಹಮೂರ್ತಿ | ಸದಸ್ಯರು |
| 15. | ಡಾ.ವಿ.ಆರ್.ದೇವರಾಜ್ | ಸದಸ್ಯರು |
| 16. | ಡಾ. ಎಸ್ ಹರಿಪ್ರಸಾದ್ | ಸದಸ್ಯರು |
| 17. | ಡಾ. ಜ್ಯೋತಿ ವೆಂಕಟೇಶ್ | ಸದಸ್ಯರು |
| 18. | ಡಾ. ಕೆ. ಆರ್. ಜಲಜಾ | ಸದಸ್ಯರು |
| 19. | ಶ್ರೀ ರಘು ಜಿ. ಪಿ, ವಿತ್ತಾಧಿಕಾರಿಗಳು | ಸದಸ್ಯರು |
| 20. | ಡಾ. ವಿ.ಲೋಕೇಶ | ಸದಸ್ಯ |
| | ಕುಲಸಚಿವರು (i/c) & ಕುಲಸಚಿವರು (ಮೌಲ್ಯಮಾಪನ) | ಕಾರ್ಯದರ್ಶಿಗಳು |

ಕೋರಂ ಅಭಾವದಿಂದಾಗಿ ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡಲಾಯಿತು.

ಸಭೆಯ ಪ್ರಾರಂಭದಲ್ಲಿ ಕುಲಸಚಿವರು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಸಭೆಯನ್ನು ಉದ್ದೇಶಿಸಿ ಪ್ರಸ್ತಾವಿಕವಾಗಿ ಮಾತನಾಡಲು ಸಭಾಧ್ಯಕ್ಷರನ್ನು ವಿನಂತಿಸಿದರು.

ನಂತರ ವಿಶ್ವವಿದ್ಯಾನಿಲಯದಲ್ಲಿ ಜರುಗಿದ ಪ್ರಮುಖ ಚಟುವಟಿಕೆಗಳ ಕುರಿತು ಸಂಕ್ಷಿಪ್ತ ವರದಿಯನ್ನು ಮಾನ್ಯ ಕುಲಪತಿಗಳು ಸಭೆಯಲ್ಲಿ ಮಂಡಿಸಿದರು.

ವಿಶ್ವವಿದ್ಯಾನಿಲಯದ ಪ್ರಮುಖ ಘಟನೆಗಳ ಕುರಿತು ವಿವರಿಸುತ್ತಾ ದಿನಾಂಕ 10.07.2023 ರಂದು ವಿಶ್ವವಿದ್ಯಾನಿಲಯದ ಎರಡನೇ ಘಟಿಕೋತ್ಸವವನ್ನು ಯಶಸ್ವಿಯಾಗಿ ಜರುಗಿದ್ದು ಇದಕ್ಕೆ ಪ್ರಾಧಿಕಾರಗಳ ಸದಸ್ಯರು, ವಿಶ್ವವಿದ್ಯಾನಿಲಯದ ಅಧ್ಯಾಪಕರು, ಮಹಾವಿದ್ಯಾಲಯಗಳ ಪ್ರಾಂಶುಪಾಲರು, ಶಿಕ್ಷಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ನೀಡಿದ ಸಹಕಾರದಿಂದಾಗಿ ಇದು ಸಾಧ್ಯವಾಗಿದೆ ಎಂದು ತಿಳಿಸಿ ತಮ್ಮ ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು.

ಇಂದಿನ ಸಭೆಯ ಪ್ರಮುಖ ಕಾರ್ಯಸೂಚಿ, ಸ್ಥಳೀಯ ವಿಚಾರಣಾ ಸಮಿತಿಗಳ ಶಿಫಾರಸ್ಸುಗಳನ್ನು, ಸ್ವಾಯತ್ತ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಪರಿಶೀಲನಾ ಸಮಿತಿ ವರದಿಗಳನ್ನು ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದ ಪರಿನಿಯಮಗಳನ್ನು ಅಳವಡಿಸಿಕೊಂಡು ಅವುಗಳ ಪ್ರಕಾರ ಅರ್ಜಿ ಸಲ್ಲಿಸಿ ವಿಶೇಷ / ವಿಶಿಷ್ಟ ಅಧ್ಯಯನಗಳನ್ನು ಮಾನ್ಯತೆ ನೀಡಲು ಕೋರಿ ಸಲ್ಲಿಸಿದ ಸಂಸ್ಥೆಗಳ ಅರ್ಜಿಗಳ ಮೇಲೆ ತಜ್ಞರ ಸಮಿತಿಯ ಶಿಫಾರಸ್ಸುಗಳನ್ನು ಪರಿಶೀಲಿಸುವುದನ್ನು ಒಳಗೊಂಡಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮತ್ತು ಬ್ರಿಟಿಷ್ ಕೌನ್ಸಿಲ್‌ಗಳ ಸಹಯೋಗದೊಂದಿಗೆ, ಕರ್ನಾಟಕ ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳು ಮತ್ತು ಯು.ಕೆ. ದೇಶದ ವಿಶ್ವವಿದ್ಯಾಲಯಗಳೊಂದಿಗೆ **"Furthering Higher Education Partnership – United Kingdom and Karnataka"** ಅಡಿಯಲ್ಲಿ ರಾಜ್ಯ ಸರ್ಕಾರದ ನಿಯೋಗದ ಸದಸ್ಯರಾಗಿ ಯು.ಕೆ. ದೇಶದ ಐದು ವಿಶ್ವವಿದ್ಯಾಲಯಗಳಿಗೆ ಮತ್ತು ಲಂಡನ್ ನಗರದಲ್ಲಿರುವ ಬ್ರಿಟಿಷ್ ಕೌನ್ಸಿಲ್ ಕಛೇರಿಗೆ, "ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮ"ದ (Leadership Development Programme) ಅಂಗವಾಗಿ; ಯುನಿವರ್ಸಿಟಿ ಆಫ್ ಬ್ರಾಡ್ ಫೋರ್ಡ್, ಯುನಿವರ್ಸಿಟಿ ಆಫ್ ಲೀಡ್ಸ್, ಯುನಿವರ್ಸಿಟಿ ಆಫ್ ಹೈಲ್ಯಾಂಡ್ಸ ಮತ್ತು ಐಲ್ಯಾಂಡ್ಸ, ಯುನಿವರ್ಸಿಟಿ ಆಫ್ ಎಡ್ಜಹಿಲ್ ಮತ್ತು ಬರ್ಮಿಂಗ್ ಹ್ಯಾಮ್ ಸಿಟಿ ಯುನಿವರ್ಸಿಟಿಗಳಿಗೆ ದಿನಾಂಕ 27.05.2023 ರಿಂದ 12.06.2023 ರ ವರೆಗೆ ಭೇಟಿ ನೀಡಿ ಆಯಾಯ ವಿಶ್ವವಿದ್ಯಾಲಯಗಳ ಕುಲಪತಿಗಳು ಹಾಗೂ ಶೈಕ್ಷಣಿಕ ಡೀನರೊಂದಿಗೆ ಚರ್ಚೆ ನಡೆಸಿ, ಆಯಾಯ ವಿಶ್ವವಿದ್ಯಾಲಯಗಳ ಶೈಕ್ಷಣಿಕ, ಆಡಳಿತ ನಿರ್ವಹಣೆ, ಸಂಶೋಧನೆ, ವಿದ್ಯಾರ್ಥಿಗಳ ಪ್ರವೇಶ, ಪರೀಕ್ಷೆಗಳ ನಿರ್ವಹಣೆ, ಪಠ್ಯಕ್ರಮ ರಚನೆ ಇತ್ಯಾದಿಗಳ ಕುರಿತು ಪರಸ್ಪರ ಚರ್ಚಿಸಲಾಯಿತು. ಇದರೊಂದಿಗೆ ಈ ವಿಶ್ವವಿದ್ಯಾಲಯಗಳೊಂದಿಗೆ ಹೊಂದಬಹುದಾದ ಶೈಕ್ಷಣಿಕ/ಸಂಶೋಧನಾ ಸಹಯೋಗ ಕುರಿತು ಚರ್ಚಿಸಲಾಯಿತು.

ಬರ್ಮಿಂಗ್‌ಹ್ಯಾಮ್ ಸಿಟಿ ವಿಶ್ವವಿದ್ಯಾಲಯದೊಂದಿಗೆ ಮಾಡಿಕೊಳ್ಳಲಾದ ತಿಳುವಳಿಕೆ ಪತ್ರದ ಮುಂದುವರಿಕೆಯಾಗಿ Net Carbon Zero Emission Hub, ಸಂಶೋಧನಾ ಯೋಜನೆಯನ್ನು ಬೆಂಗಳೂರು

ROKar6

ನಗರ ವಿಶ್ವವಿದ್ಯಾಲಯ ಮತ್ತು ಬರ್ಮಿಂಗ್‌ಹ್ಯಾಮ್ ಸಿಟಿ ಯುನಿವರ್ಸಿಟಿ ಜೊತೆಯಾಗಿ ಜಾರಿಯಲ್ಲಿ ತಂದಿದ್ದು, ವಿಶ್ವವಿದ್ಯಾನಿಲಯದ ಮ್ಯಾನೇಜಮೆಂಟ್ ವಿಭಾಗದ ಅಧ್ಯಾಪಕರು ಈ ಯೋಜನೆಯನ್ನು ನಿರ್ವಹಿಸುತ್ತಿದ್ದಾರೆ.

ಯು.ಕೆ. ದೇಶದ ವ್ಹೋಲ್ವರಹ್ಯಾಂಪ್ಟನ್ ವಿಶ್ವವಿದ್ಯಾಲಯದ ಅಹ್ವಾನದ ಮೇರೆಗೆ ದಿನಾಂಕ 15.07.2023 ರಿಂದ 22.07.2023ರ ವರೆಗೆ Visiting Research Scholar (ಸಂದರ್ಶಕ ಸಂಶೋಧನಾ ವಿದ್ವಾಂಸರಾಗಿ) ಆ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ, "Sustainable SMART Cities Coping with Crisis, Lessons from Global Pandemic" ವಿಷಯದ ಸಂಶೋಧನಾ ಯೋಜನೆಯಲ್ಲಿ ಪಾಲ್ಗೊಂಡು ತಮ್ಮ ಅನುಭವವನ್ನು ಹಾಗೂ ಜ್ಞಾನವನ್ನು ಹಂಚಿಕೊಳ್ಳುವುದಾಗಿ ಸಭೆಗೆ ತಿಳಿಸಿದರು. ಸದರಿ ಪ್ರಯಾಣ ಹಾಗೂ ವಾಸ್ತವ್ಯದ ಎಲ್ಲ ವೆಚ್ಚಗಳನ್ನು ವ್ಹೋಲ್ವರಹ್ಯಾಂಪ್ಟನ್ ವಿಶ್ವವಿದ್ಯಾಲಯದ ಸಂಶೋಧನಾ ಯೊಜನೆಗಳ ನಿಧಿಯಿಂದ ಭರಿಸಲಾಗುವುದು. ವಿಶ್ವವಿದ್ಯಾಲಯಕ್ಕೆ ಯಾವುದೇ ರೀತಿಯ ಹಣಕಾಸಿನ ಬಾಧ್ಯತೆ ಇರುವುದಿಲ್ಲ. ಈ ಭೇಟಿಯ ಸಂದರ್ಭದಲ್ಲಿ ಎರಡೂ ವಿಶ್ವವಿದ್ಯಾಲಯಗಳ ಮಧ್ಯ ಶೈಕ್ಷಣಿಕ ಮತ್ತು ಸಂಶೋಧನಾ ರಂಗದಲ್ಲಿ ಪರಸ್ಪರ ಸಹಯೋಗ ಕುರಿತು ಚರ್ಚಿಸಲಾಗುವುದು.

ಇದಲ್ಲದೆ ಬರ್ಮಿಂಗ್ ಹ್ಯಾಮ್ ನಗರ ವಿಶ್ವವಿದ್ಯಾಲಯ "ಲಿಂಗ ಸಮಾನತೆ" (Gender Equity) ಕುರಿತಂತೆ ನಮ್ಮ ವಿಶ್ವವಿದ್ಯಾನಿಲಯದೊಂದಿಗೆ ಜಂಟಿ ಸಂಶೋಧನಾ ಯೋಜನೆಗೆ ಒಪ್ಪಿಗೆ ಸೂಚಿಸಿದ್ದು, ವೇಲ್ಸ್ ವಿಶ್ವವಿದ್ಯಾನಿಲಯ ಸಹ Sports Science & Life Science ವಿಷಯಗಳಲ್ಲಿ ಜಂಟಿ ಸಂಶೋಧನಾ ಯೋಜನೆಗೆ ಒಪ್ಪಿಗೆ ಸೂಚಿಸಿರುತ್ತಾರೆ. ಆಗಸ್ಟ್ ತಿಂಗಳಲ್ಲಿ ಆ ವಿಶ್ವವಿದ್ಯಾಲಯದ ತಜ್ಞರ ತಂಡ ನಮ್ಮ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಚರ್ಚಿಸಲಿದ್ದಾರೆ ಎಂದು ತಿಳಿಸಿದರು.

ಸ್ಥಳೀಯ ವಿಚಾರಣಾ ಸಮಿತಿಗಳ ಅಧ್ಯಕ್ಷರು ಅತ್ಯಂತ ಕಡಿಮೆ ಅವಧಿಯಲ್ಲಿ ವರದಿಗಳನ್ನು ಸಲ್ಲಿಸಿದ್ದಾರೆ. ಅವುಗಳನ್ನು ಕೂಡಲೇ ಪ್ರಾಧಿಕಾರಗಳ ಅನುಮೋದನೆಗೂ ಸಹ ಮಂಡಿಸಲಾಗಿದೆ. ಇದಕ್ಕಾಗಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರಿಗೆ ಧನ್ಯವಾದಗಳನ್ನು ತಿಳಿಸಿದರು. ವರದಿಗಳನ್ನು ಕ್ರೋಢೀಕರಿಸಿ ಸಭೆಯ ಪರಿಶೀಲನೆಗೆ ಮಂಡಿಸಲಾಗಿದೆ. ಯು.ಯು.ಸಿ.ಎಂ.ಎಸ್. ಪೋರ್ಟಲ್ ನಲ್ಲಿ ಪ್ರಥಮ ಸಲ ಈ ವರದಿಗಳನ್ನು ಸಿದ್ಧಪಡಿಸುತ್ತಿರುವುದರಿಂದ, ಅವುಗಳಲ್ಲಿ ಹಲವು ಲೋಪದೋಷಗಳು ಉಂಟಾಗಿರುವ ಸಾಧ್ಯತೆಗಳಿವೆ. ಅಂತಹ ಲೋಪದೋಷಗಳನ್ನು ಸರಿಪಡಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ತಿಳಿಸಿ, ಕುಲಸಚಿವರಿಗೆ ಕಾರ್ಯಸೂಚಿಯನ್ನು ಮಂಡಿಸಲು ಸೂಚಿಸಿದರು.

ಸದಸ್ಯರಾದ ಡಾ. ನರಸಿಂಹಮೂರ್ತಿಯವರು ಸಭೆಯ ಕಾರ್ಯಕಲಾಪಗಳ ನೇರಪ್ರಸಾರ ಮಾಡದಿರುವುದರ ಕುರಿತು ಮಾಹಿತಿ ಕೋರಿದರು. ಕುಲಪತಿಗಳು ಈ ಕುರಿತು ಪ್ರಾಧಿಕಾರಗಳ ಸಭೆಗಳಲ್ಲಿ ಚರ್ಚಿಸಲಾಗಿದೆ. ಕುಲಾಧಿಪತಿಗಳ ಕಛೇರಿಯ ನಿರ್ದೇಶನದಂತೆ, ಸಭೆಯ ಕಾರ್ಯಕಲಾಪಗಳ ವಿಡಿಯೋ ರಿಕಾರ್ಡ ಮಾಡಲಾಗುತ್ತಿದೆ ಸರ್ಕಾರಕ್ಕೂ ಸಹ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ಅಧಿಕಾರೇತರ ಸದಸ್ಯರ ವಿದ್ಯಾವಿಷಯಕ ಪರಿಷತ್ತಿಗೆ ನಾಮನಿರ್ದೇಶಿತರಾದ ಮೂರು ಜನ ಸದಸ್ಯರ ಸದಸ್ಯತ್ವವನ್ನು ಸರ್ಕಾರ ರದ್ದುಪಡಿಸಿದ್ದು ಅವರು ಸ್ಥಳೀಯ ವಿಚಾರಣಾ ಸಮಿತಿ ಸದಸ್ಯರಾಗಿ ನೇಮಕ ಮಾಡಿರುವುದು ಸರಿಯಲ್ಲವೆಂದು ತಿಳಿಸಿ ಅಂತಹ ಸಮಿತಿಗಳಿಗೆ ಬೇರೊಬ್ಬ ಸದಸ್ಯರನ್ನು ನೇಮಿಸಿ ವರದಿ ಪಡೆಯಬೇಕೆಂದು ಸದಸ್ಯರಾದ ಡಾ. ನರಸಿಂಹಮೂರ್ತಿಯವರು ಪ್ರಸ್ತಾಪಿಸಿದರು. ಸದಸ್ಯರಾದ ಡಾ: ವಿ.ಆರ್. ದೇವರಾಜ್ ರವರು ಸಹ ಸಹಮತ ವ್ಯಕ್ತಪಡಿಸಿ, ಬೇರೊಬ್ಬ ಸದಸ್ಯರನ್ನು ನಾಮಕರಣ ಮಾಡಿ ಕೂಡಲೇ ವರದಿ ಪಡೆದು, ಸದರಿ ವರದಿಗಳನ್ನು ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆ ಕಾಯ್ದಿರಿಸಿ ಕುಲಪತಿಗಳು ಅನುಮೋದಿಸಿ ಅಗತ್ಯ ಕ್ರಮ ವಹಿಸಬಹುದೆಂದು ಹೇಳಿದರು. ಕುಲಪತಿಗಳು ಈ ಸಲಹೆಗೆ ಒಪ್ಪಿಗೆ ನೀಡಿದರು.

**ವಿಷಯ ಸಂಖ್ಯೆ: 01**

ವಿಷಯ: 2023–24ನೇ ಶೈಕ್ಷಣಿಕ ವರ್ಷಕ್ಕೆ ಮಹಾವಿದ್ಯಾಲಯಗಳ ಸಂಯೋಜನೆಗೆ ಸಂಬಂಧಿಸಿದಂತೆ, a) ಅಸ್ತಿತ್ವದಲ್ಲಿರುವ ಕಾಲೇಜುಗಳಿಗೆ ಸಂಯೋಜನೆ ನವೀಕರಣ/ಹೊಸ ಕೋರ್ಸುಗಳು, b) ಕೋರ್ಸುಗಳು/ಹೊಸ ವಿಷಯಗಳು ಪ್ರಾರಂಭಿಸುವುದು, c) ಪ್ರವೇಶ ಸಂಖ್ಯೆಗಳನ್ನು ಹೆಚ್ಚಿಸುವುದು/ಕಡಿಮೆಗೊಳಿಸುವುದು, d)ಕಾಲೇಜಿನ ಹೆಸರು ಮತ್ತು ವಿಳಾಸ ಬದಲಾವಣೆ, e) ಅಸ್ತಿತ್ವದಲ್ಲಿರುವ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ನವೀಕರಣ, f) ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಮತ್ತು ಹೊಸ ಕಾಲೇಜುಗಳನ್ನು ಪ್ರಾರಂಭಿಸಲು, g) ಹಾಲಿ ಇರುವ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡಲು, h) ಸಂಪೂರ್ಣ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ ನವೀಕರಣ ಕುರಿತಂತೆ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸುಗಳ ಪರಿಶೀಲನೆ ಮತ್ತು ಅನುಮೋದನೆ ಕುರಿತು.

ಉಲ್ಲೇಖ:
1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ರಂತೆಕಾಲೇಜು ಸಂಯೋಜನೆ 3,4,6ರ ಪ್ರಕಾರ
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 47ಯುಎನ್‌ಇ/2023, ಬೆಂಗಳೂರು, ದಿನಾಂಕ: 02.05.2023
3. ವಿ.ವಿ. ಅಧಿಸೂಚನೆ ಸಂಖ್ಯೆ:ಬೆಂ.ನ.ವಿ/ಶೈ.ವಿ.ಸಂ/01/2023–24, ದಿನಾಂಕ: 24.04.2023
4. Notification No:BCU/Affin/LIC/02/2023-24, Date: 26.06.2023.

***ಪರಮಾರ್ಶಕ ಟಿಪ್ಪಣಿ:***

ಉಲ್ಲೇಖ (1) ರ ಕರ್ನಾಟಕರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59ರ ಪ್ರಕಾರ ಮತ್ತು ಉಲ್ಲೇಖ (2) ರ ಸರ್ಕಾರದ ಆದೇಶದ ಅನುಗುಣವಾಗಿ 2023–24ನೇ ಶೈಕ್ಷಣಿಕ ವರ್ಷಕ್ಕೆ ಮಹಾವಿದ್ಯಾಲಯಗಳ ಕೆಳಗೆ ನಮೂದಿಸಿದಂತೆ ವಿವಿಧ ಪ್ರಕಾರಗಳ ಸಂಯೋಜನೆಗೆ ಉಲ್ಲೇಖ (3) ರ ಅಧಿಸೂಚನೆಯನ್ನು ಎರಡು ಪ್ರಮುಖ ದಿನ ಪತ್ರಿಕೆಗಳಲ್ಲಿ ದಿನಾಂಕ 24.04.2023 ರಂದುಪ್ರಕಟಿಸಿ, ಅರ್ಜಿಗಳನ್ನು ಆಹ್ವಾನಿಸಲಾಗಿದೆ.

a) ಅಸ್ತಿತ್ವದಲ್ಲಿರುವ ಕಾಲೇಜುಗಳ ಸಂಯೋಜನೆ ನವೀಕರಣ/ಕೋರ್ಸುಗಳು

b) ಹೊಸ ವಿಷಯಗಳನ್ನು ಪ್ರಾರಂಭಿಸುವುದು

c) ಪ್ರವೇಶ ಸಂಖ್ಯೆಗಳನ್ನು ಹೆಚ್ಚಿಸುವುದು/ಕಡಿಮೆಗೊಳಿಸುವುದು

d) ಕಾಲೇಜಿನ ಹೆಸರು ಮತ್ತು ವಿಳಾಸ ಬದಲಾವಣೆ

e) ಅಸ್ತಿತ್ವದಲ್ಲಿರುವ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ನವೀಕರಣ

f) ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಮತ್ತು ಹೊಸ ಕಾಲೇಜುಗಳನ್ನು ಪ್ರಾರಂಭಿಸುವುದು.

g) ಹಾಲಿ ಇರುವ ಕಾಲೇಜುಗಳ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡುವುದು.

h) ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ ನವೀಕರಣ.

ಉಲ್ಲೇಖ(3)ರ ಅಧಿಸೂಚನೆಯ ಪ್ರಕಾರ ಕಾಲೇಜುಗಳಿಂದ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ, E-Governance (ಇ–ಆಡಳಿತ) ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳಿಗೆ ಅನ್ವಯಿಸುವ Soft ware (ಸಾಫ್ಟ್‌ವೇರ್) ಸಿದ್ದಪಡಿಸಿದ ಮೇಲೆ ನಮೂದಿಸಿದ ವಿವಿಧ ಪ್ರಕಾರ ಸಂಯೋಜನೆಗೆ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವಂತೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ ಅನುಚ್ಛೇಧ 59(6)ರ ಪ್ರಕಾರ ವಿವಿಧ ಪ್ರಕಾರದ ಸಂಯೋಜನೆ ಕೋರಿ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಲು ದಿನಾಂಕ **23.05.2023** ರಂದು ಜರುಗಿದ ಸಿಂಡಿಕೇಟ್ ಸಭೆಯಿಂದ ಮಾನ್ಯ ಕುಲಪತಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್ ಸದಸ್ಯರು/ ಡೀನರು / ಪ್ರಾಧ್ಯಾಪಕರು ಹಾಗೂ ವಿಷಯ ತಜ್ಞರನ್ನು ಒಳಗೊಂಡ 14 ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಿ ಉಲ್ಲೇಖ(4)ರ ಅಧಿಸೂಚನೆಗಳನ್ನು ಹೊರಡಿಸಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದಲ್ಲಿರುವ ನಿಬಂಧನೆಗಳ ಪ್ರಕಾರ ಪ್ರತಿ ವಿಚಾರಣಾ ಸಮಿತಿಯಲ್ಲಿ ಒಬ್ಬರು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಸದಸ್ಯರು ಇರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ.

ಸಂಯೋಜನೆಗೆಈ ಕೆಳಕಂಡ ಅಂಕಗಳ ಮಾನದಂಡಗಳನ್ನು ನಿಗದಿಗೊಳಿಸಲಾಗಿದೆ.

| ಕ್ರ.ಸಂ. | ಸಂಯೋಜನೆಯ ಪ್ರಕಾರಗಳು | ನಿಗಧಿಪಡಿಸಿದ ಕನಿಷ್ಠ ಸಂಯೋಜನಾಅಂಕಗಳು(%) (ರಿಯಾಯಿತಿ ನಂತರ) |
|---|---|---|
| 1 | ಹೊಸ ಸಂಯೋಜನೆ | 45 |
| 2 | ಸಂಯೋಜನೆಗಳ ನವೀಕರಣ/ಮುಂದುವರಿಕೆ/ವಿಸ್ತರಣೆ | 45 |
| 3 | ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳ | 50 |
| 4 | ಹೊಸ ಕೋರ್ಸುಗಳ/ಹೊಸ ಕಾಂಬಿನೇಷನ್‌ಗಳ ಮಂಜೂರಾತಿ | 55 |
| 5 | ಹೊಸ ಶಾಶ್ವತ ಸಂಯೋಜನೆ | 60 |
| 6 | ಶಾಶ್ವತ ಸಂಯೋಜನೆಗಳ ನವೀಕರಣ | 70 |

ಸರ್ಕಾರದ ಆದೇಶದಲ್ಲಿ ಮಹಾವಿದ್ಯಾಲಯಗಳು ಹೊಂದಿರ ಬೇಕಾದ ಜಮೀನಿನ ವಿಸ್ತೀರ್ಣಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| | | |
|---|---|---|
| 1 | ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯ ಪ್ರದೇಶದಲ್ಲಿ | 0.5 ಎಕರೆ ವಿಸ್ತೀರ್ಣ |
| 2 | ಬಿ.ಎಂ.ಆರ್.ಡಿ.ಎ / ನಗರ ಪಾಲಿಕೆ ಮತ್ತು ಜಿಲ್ಲಾಡಳಿತ ಕೇಂದ್ರ ಸ್ಥಾನ ವ್ಯಾಪ್ತಿಯ ಪ್ರದೇಶದಲ್ಲಿ | 1.0 ಎಕರೆ ವಿಸ್ತೀರ್ಣ |
| 3 | ನಗರ ಸಭೆ / ತಾಲ್ಲೋಕುಕೇಂದ್ರಸ್ಥಾನ ವ್ಯಾಪ್ತಿಯ ಪ್ರದೇಶದಲ್ಲಿ | 1.5 ಎಕರೆ ವಿಸ್ತೀರ್ಣ |
| 4 | ಬೆಂಗಳೂರು ಗ್ರಾಮೀಣ ವ್ಯಾಪ್ತಿಯ ಪ್ರದೇಶದಲ್ಲಿ | 3.0 ಎಕರೆ ವಿಸ್ತೀರ್ಣ |
| **ಸೂ: ಮಹಾವಿದ್ಯಾಲಯಗಳು ಮೇಲೆ ಸೂಚಿಸಿದ ವಿಸ್ತೀರ್ಣ ಜಮೀನು ಹೊಂದಿರುವ ಕುರಿತು ಭೂದಾಖಲೆಗಳನ್ನು ಒದಗಿಸತಕ್ಕದ್ದು.** | | |

2023-24ರ ಸಂಯೋಜನೆಗೆ ಸಂಬಂಧಪಟ್ಟಂತೆ, ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾಲಯಗಳು ಸಂಯೋಜನಾ ಪ್ರಕ್ರಿಯೆಯನ್ನು ನಡೆಸಿ, ಶಿಫಾರಸ್ಸುಗಳನ್ನು ಅನ್‌ಲೈನ್ ಮುಖಾಂತರ ಸರ್ಕಾರಕ್ಕೆ ಕಳುಹಿಸಬೇಕಾಗಿದೆ.

(I) ಒಂದು ಬಾರಿಯಕ್ರಮವಾಗಿ ಸಂಯೋಜನಾ ಅಂಕ (Affiliation Score) ಗಳಲ್ಲಿ ಶೇ.5% ರಷ್ಟು ಅಂಕಗಳ ರಿಯಾಯಿತಿ ನೀಡಿ, ಮೇಲಿನ 4ನೇ ಕಂಡಿಕೆಯ ಪಟ್ಟಿಯಲ್ಲಿ ನೀಡಿರುವಂತೆ ಸಂಯೋಜನಾ ಅಂಕಗಳ ಆಧಾರದ ಮೇಲೆ ಶಿಫಾರಸ್ಸು ಮಾಡುವುದು.

(II) ಈ ಹಿಂದಿನ ವರ್ಷಗಳಲ್ಲಿ ಸಂಯೋಜನೆಯಾಗಿರುವ ಕಾಲೇಜುಗಳು, ಪ್ರಸಕ್ತ ಸಾಲಿನಲ್ಲಿ ವ್ಯಾಖ್ಯಾನಿಸಲಾದ ಮಾನದಂಡಗಳ (Defined parameters) 8 ಅಂಶಗಳನ್ನು ಪೂರ್ಣಗೊಳಿಸದೆ ಇದ್ದರೆ, ಮುಂದಿನ 2 ವರ್ಷಗಳಲ್ಲಿ Defined parameters ಗಳನ್ನು ಪೂರ್ಣಗೊಳಿಸುವ ನಿಬಂಧನೆಗೆ ಒಳಪಡಿಸಿ ಸಂಯೋಜನೆಯನ್ನು ನೀಡಬಹುದು ಹಾಗೂ ಸದರಿ ಕಾಲೇಜುಗಳಿಗೆ ಯಾವುದೇ ಹೊಸ ಕೋರ್ಸು / ವಿಷಯಗಳನ್ನು ನೀಡತಕ್ಕದ್ದಲ್ಲ.

(III) ಹೊಸ ಶಿಕ್ಷಣ ನೀತಿಯನ್ನು 2021-22ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನ ಗೊಳಿಸಿರುವ ಹಿನ್ನಲೆಯಲ್ಲಿ ವಿಷಯ ಸಮೂಹಗಳ ಬದಲು ವೈಯುಕ್ತಿಕ ವಿಷಯಗಳಿಗೆ ಸಂಯೋಜನೆ ನೀಡಬೇಕಾಗುತ್ತದೆ. ಹಾಗಾಗಿ ವಿಶ್ವವಿದ್ಯಾನಿಲಯಗಳು ಮುಂದುವರಿಕೆ ಅಥವಾ ಹೊಸ ಸಂಯೋಜನೆಗಳನ್ನು ಆಯಾ ಕೋರ್ಸಿನ ಎಲ್ಲಾ ವಿಷಯಗಳನ್ನು ಒಳಗೊಂಡಂತೆ ಸಂಯೋಜನೆ ನೀಡಲು ಶಿಫಾರಸ್ಸು ಮಾಡಬೇಕಾಗುತ್ತದೆ.

ವಿವಿಧ ಸ್ಥಳೀಯ ವಿಚಾರಣಾ ಸಮಿತಿಗಳು ತಮಗೆ ವಹಿಸಲಾದ ಕಾಲೇಜುಗಳಿಗೆ ಭೌತಿಕವಾಗಿ ಭೇಟಿ ನೀಡಿ, ತನಿಖೆ ನಡೆಸಿ ವರದಿಗಳನ್ನು ಆನ್-ಲೈನ್ ಮುಖಾಂತರ ಹಾಗೂ ಸಹಿ ಮಾಡಿದ ಮುದ್ರಿತ ಪ್ರತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.

| Affiliated Colleges | General Colleges | SC/ST colleges | Women's Colleges | Minority Colleges | Evening Colleges | Physical Education college | Total |
|---|---|---|---|---|---|---|---|
| Aided Colleges | 17 | 01 (Evening College) | 02 | 04 (W. Colleges- 02) | 03 | -- | 27 |
| Un-Aided Colleges | 104 | 06 | 04 | 23 (include Minority- W-03 + Eve-03=06) | 21 | --- | 158 |
| Government Colleges | 11 | -- | 01 | -- | -- | -- | 12 |
| Aided (B.Ed) Colleges | 06 | -- | --- | 01 | -- | -- | 07 |
| Un-aided (B.Ed) Colleges | 13 | 01 | -- | 03 | -- | 01 ( Minority) | 18 |
| | 151 | 08 | 07 | 31 | 24 | 01 | 222 |

**(Prayukthi International College is not applied for renewal of affiliation in time so it is not included in the online portal)**

| | |
|---|---|
| 2023-24ನೇ ಶೈಕ್ಷಣಿಕ ವರ್ಷಕ್ಕೆಆರ್ಜಿ ಸಲ್ಲಿಸದೇಇರುವ ಸಂಯೋಜಿತ ಕಾಲೇಜುಗಳ ಒಟ್ಟು ಸಂಖ್ಯೆ | - |
| 2022-24ನೇ ಶೈಕ್ಷಣಿಕ ವರ್ಷಕ್ಕೆಆರ್ಜಿ ಸಲ್ಲಿಸಿರುವ ಸಂಯೋಜಿತ ಕಾಲೇಜುಗಳ ಒಟ್ಟು ಸಂಖ್ಯೆ | 222 |
| 2022-24ನೇ ಶೈಕ್ಷಣಿಕ ವರ್ಷಕ್ಕೆ ಹೊಸ ಸಂಯೋಜನೆ/ಕಾಲೇಜುಗಳಿಗೆ ಆರ್ಜಿ ಸಲ್ಲಿಸಿರುವ ಒಟ್ಟು ಸಂಖ್ಯೆ | 07 |

**Existing Colleges 222 + 07 New Colleges Affiliation Sought**

| ಕ್ರ. ಸಂ | ಕಾಲೇಜುಗಳು | ಅರ್ಜಿ ಸಲ್ಲಿಸಿರುವ ಒಟ್ಟು ಕಾಲೇಜುಗಳ ಸಂಖ್ಯೆ |
|---|---|---|
| 1. | ಅಸ್ತಿತ್ವದಲ್ಲಿರುವ ಕಾಲೇಜುಗಳ ಕೋರ್ಸು/ ಕಾಂಬಿನೇಷನ್/ವಿಷಯಗಳ ಸಂಯೋಜನೆ ನವೀಕರಣಕ್ಕಾಗಿ ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಕಾಲೇಜುಗಳ ಸಂಖ್ಯೆ | 197 |
| 2. | ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ವಿದ್ಯಾರ್ಥಿ ಪ್ರಮಾಣ ಹೆಚ್ಚಳ | 30 |
| 3. | ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ವಿದ್ಯಾರ್ಥಿ ಪ್ರಮಾಣ ಕಡಿಮೆಗೊಳಿಸುವುದು | 29 |
| 4. | ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಕೋರ್ಸುಗಳು/ವಿಷಯಗಳನ್ನು ಪ್ರಾರಂಭಿಸಲು ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಕಾಲೇಜುಗಳ ಸಂಖ್ಯೆ | 40 |
| 5. | ಹೊಸ ಶಾಶ್ವತ ಸಂಯೋಜನೆಗಾಗಿ ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಕಾಲೇಜುಗಳ ಸಂಖ್ಯೆ | 9 |
| 6. | ಶಾಶ್ವತ ಸಂಯೋಜನೆಯ ಮುಂದುವರಿಕೆಗೆ ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಕಾಲೇಜುಗಳ ಸಂಖ್ಯೆ | 44 |
| 7. | ಹಾಲಿ ಇರುವ ಕಾಲೇಜುಗಳಲ್ಲಿನ ಕೋರ್ಸುಗಳ ಮುಚ್ಚುವಿಕೆ ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಕಾಲೇಜುಗಳ ಸಂಖ್ಯೆ | 5 |
| 8. | ಹಾಲಿ ಇರುವ ಕಾಲೇಜುಗಳಲ್ಲಿನ ಹೆಸರು/ವಿಳಾಸ ಬದಲಾವಣೆಯ ವರದಿಗಳನ್ನು ಪರಿಗಣಿಸಬೇಕಾದ ಕಾಲೇಜುಗಳ ಸಂಖ್ಯೆ | 4+1 |
| 9. | ಹಾಲಿ ಇರುವ ಸ್ವಾಯತ್ತ ಕಾಲೇಜುಗಳ ಸಂಖ್ಯೆ | 08 |
| 10. | ಹೊಸ ಕಾಲೇಜುಗಳನ್ನು ಪ್ರಾರಂಭಿಸಲು ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಸಂಸ್ಥೆಗಳ ಸಂಖ್ಯೆ | 07 |
| 11. | ಅರ್ಜಿ ಸಲ್ಲಿಸದೇ ಇರುವ ಹಾಲಿ ಕಾಲೇಜುಗಳ ಸಂಖ್ಯೆ | 1 |

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ ಅನುಚ್ಛೇಧ 59(8)ರ ಪ್ರಕಾರ 14 ಸ್ಥಳೀಯ ವಿಚಾರಣಾ ಸಮಿತಿಗಳ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಪರಿಶೀಲನೆ ಹಾಗೂ ಸೂಕ್ತ ಶಿಫಾರಸ್ಸಿಗಾಗಿ ಮಂಡಿಸಲಾಗಿದೆ.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಸರ್ಕಾರದ ಅಧಿಸೂಚನೆಯ ಪ್ರಕಾರ ವಿದ್ಯಾವಿಷಯಕ ಪರಿಷತ್ತಿಗೆ ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಂಗ್, ಇನ್ನಿತರ ವೃತ್ತಿಗಳಿಂದ ನಾಮನಿರ್ದೇಶಿತರಾದ 3 ಜನ ಅಧಿಕಾರೇತರ ಸದಸ್ಯರ ಸದಸ್ಯತ್ವ ರದ್ದುಪಡಿಸಲು ವಿಳಂಬವಾದ ಹಿನ್ನೆಲೆಯಲ್ಲಿ ಅವರು ಸದಸ್ಯರಾಗಿ ಕಾರ್ಯನಿರ್ವಹಿಸಿದ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಬೇರೊಬ್ಬರನ್ನು ಸದಸ್ಯರಾಗಿ ನಾಮನಿರ್ದೇಶನ ಮಾಡಿ ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳನ್ನು ಪಡೆಯಬೇಕೆಂದು ಆ ವರದಿಯ ಆಧಾರದ ಮೇಲೆ ವಿದ್ಯಾವಿಷಯಕ ಪರಿಷತ್ತಿನ ಅನುಸಮರ್ಥನೆಯನ್ನು ನಿರೀಕ್ಷಿಸಿ ಅಗತ್ಯ ಕ್ರಮಕೈಕೊಳ್ಳಲು ವಿದ್ಯಾವಿಷಯಕ ಪರಿಷತ್ ಸಭೆ ಅನುಮೋದನೆ ನೀಡಿತು.**

**ಮೇಲಿನ ತೀರ್ಮಾನದಂತೆ ಕಲಾ ನಿಕಾಯದ ಡೀನರಾದ ಡಾ. ಜ್ಯೋತಿ ವೆಂಕಟೇಶ್ ಮತ್ತು ಸಿಂಡಿಕೇಟ್ ಸದಸ್ಯರಾದ ಶ್ರೀ ಸತೀಶ್ ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಎರಡು ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಬೇರೊಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡಿ ವರದಿ ಪಡೆಯಲು ವಿದ್ಯಾವಿಷಯಕ ಪರಿಷತ್ ಸಭೆ ಒಪ್ಪಿಗೆ ನೀಡಿತು. ಕೆಳಕಂಡ 12 ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳನ್ನು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು / ಸದಸ್ಯರು ಪ್ರಸ್ತುತ ಪಡಿಸಿದರು.**

1. ಪ್ರೊ. ವಿ. ಆರ್ ದೇವರಾಜ್ ರವರ ಅಧ್ಯಕ್ಷತೆಯ ಸಮಿತಿ:-
2. ಪ್ರೊ. ಕೆ. ಎಂ. ಮಹೇಶ್ ರವರ ಅಧ್ಯಕ್ಷತೆಯ ಸಮಿತಿ:-
3. ಪ್ರೊ. ಎಸ್. ಹರಿಪ್ರಸಾದ್ ರವರ ಅಧ್ಯಕ್ಷತೆಯ ಸಮಿತಿ:-
4. ಶ್ರೀ. ಎಂ. ವಿ. ರಂಗಪ್ಪ ರವರ ಅಧ್ಯಕ್ಷತೆಯ ಸಮಿತಿ:-
5. ಪ್ರೊ. ಪಿ.ಆರ್. ಚೇತನ ರವರ ಅಧ್ಯಕ್ಷತೆಯ ಸಮಿತಿ:-
6. ಶ್ರೀ ಸಮರ್ಥ ಮುನಿರಾಜು ರವರ ಅಧ್ಯಕ್ಷತೆಯ ಸಮಿತಿ:-
7. ಡಾ. ಎಸ್. ಎನ್. ವೆಂಕಟೇಶ್ ರವರ ಅಧ್ಯಕ್ಷತೆಯ ಸಮಿತಿ:-
8. ಡಾ. ಸಿ. ಎಂ. ನವೀನ್‌ಕುಮಾರ್ ರವರ ಅಧ್ಯಕ್ಷತೆಯ ಸಮಿತಿ:-
9. ಪ್ರೊ. ಎನ್. ನರಸಿಂಹಮೂರ್ತಿ ರವರ ಅಧ್ಯಕ್ಷತೆಯ ಸಮಿತಿ:-
10. ಡಾ. ಕೆ. ಆರ್. ಜಲಜಾ ರವರ ಅಧ್ಯಕ್ಷತೆಯ ಸಮಿತಿ:-
11. ಪ್ರೊ. ಎಂ. ಪಾಂಡುರಂಗಪ್ಪ ರವರ ಅಧ್ಯಕ್ಷತೆಯ ಸಮಿತಿ:-
12. ಡಾ. ಕೆ. ಶಿವಶಂಕರ್ ರವರ ಅಧ್ಯಕ್ಷತೆಯ ಸಮಿತಿ:-

ಸಮಿತಿ ಸಂ. 4 ರ ಅಧ್ಯಕ್ಷರಾದ ಶ್ರೀ ಎಂ.ವಿ. ರಂಗಪ್ಪ ಸಮಿತಿ ಸಂ. 7 ರ ಅಧ್ಯಕ್ಷರಾದ ಶ್ರೀ ಸಮರ್ಥ ಮುನಿರಾಜು, ಸಮಿತಿ ಸಂ. 13 ರ ಅಧ್ಯಕ್ಷರಾದ ಡಾ. ಎಂ. ಪಾಂಡುರಂಗಪ್ಪನವರು ದಿನಾಂಕ 10.07.2023 ಮತ್ತು 11.07.2023 ರಂದು ಸಲ್ಲಿಸಿದ ಪರಿಷ್ಕೃತ ವರದಿ ಪರಿಗಣಿಸಲಾಯಿತು. ಬಿಷಪ್ ಕಾಟನ್ ಮಹಾವಿದ್ಯಾಲಯಕ್ಕೆ ಸಂಬಂಧಿಸಿದಂತೆ ಪ್ರವೇಶ ಸಂಖ್ಯೆಗಳು ಗಣನೀಯವಾಗಿ ಹೆಚ್ಚು ಆಗಿರುವುದನ್ನು ಸದಸ್ಯರಾದ ಡಾ.ಎಲಿಝಾಬತ್ ಜಾಸ್ಮಿನ್‌ರವರು ಸಭೆಯ ಗಮನಕ್ಕೆ ತಂದರು.

ವರದಿಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಹಲವಾರು ತಾಂತ್ರಿಕ ಹಾಗೂ ಬೆರಳಚ್ಚು ದೋಷಗಳು ಕಂಡು ಬಂದಿದ್ದು, ಇನ್ನು ಕೆಲವು ಮಹಾವಿದ್ಯಾಲಯಗಳು / ಸಂಸ್ಥೆಗಳು ಮನವಿಗಳನ್ನು ಸಲ್ಲಿಸಿ, ತಮ್ಮ ಮಹಾವಿದ್ಯಾಲಯಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ತಿಳಿಸಿರುತ್ತಾರೆ. ಇಂತಹ ಮೂರು ಪ್ರಕರಣಗಳ ಒಳಗೊಂಡಂತೆ ಸ್ಥಳೀಯ ವಿಚಾರಣಾ ಸಮಿತಿ ಮತ್ತು ಪರಮಾರ್ಶಕ ಟಿಪ್ಪಣಿಗಳಲ್ಲಿ ಉಂಟಾಗಿರಬಹುದಾದ ನ್ಯೂನ್ಯತೆ ಹಾಗೂ ತಪ್ಪು-ಒಪ್ಪುಗಳ ಕುರಿತಂತೆ ಮಾನ್ಯ ಕುಲಪತಿಗಳು ಅಗತ್ಯ ಕ್ರಮ ವಹಿಸಿ ಸರ್ಕಾರಕ್ಕೆ ಸಲ್ಲಿಸಲು ಸಭೆ ಒಪ್ಪಿಗೆ ನೀಡಿ ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳನ್ನು ಅನುಮೋದಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲು ವಿದ್ಯಾವಿಷಯಕ ಪರಿಷತ್ ಅನುಮೋದನೆ ನೀಡಿತು.

MBA, MCA ವ್ಯಾಸಂಗಗಳ ಪ್ರವೇಶ ಸಂಖ್ಯೆ ಹೆಚ್ಚಿಸಲು AICTE ಪೂರ್ವಾನುಮತಿ ಅಗತ್ಯವಾಗಿರುವುದರಿಂದ, ಅಂತಹ ವ್ಯಾಸಂಗಗಳ ಪ್ರವೇಶ ಸಂಖ್ಯೆ ಹೆಚ್ಚಳಕ್ಕೆ ಮಾಡಿದ ಶಿಫಾರಸ್ಸು AICTE ಅನುಮೋದನೆ ಪಡೆಯುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಈಗಾಗಲೇ AICTE ಅನುಮೋದನೆ ಪಡೆದಿದ್ದಲ್ಲಿ ಈ ಶರತ್ತು ಅನ್ವಯವಾಗುವುದಿಲ್ಲ ಎಂದು ವಿದ್ಯಾವಿಷಯಕ ಪರಿಷತ್ತು ಅಭಿಪ್ರಾಯ ವ್ಯಕ್ತಪಡಿಸಿತು.

ಸ್ಥಳೀಯ ವಿಚಾರಣಾ ಸಮಿತಿಗಳಿಗೆ ವಹಿಸಲಾದ ಮಹಾವಿದ್ಯಾಲಯಗಳು ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಗೆ ಅನುಗುಣವಾಗಿ ಇರಬೇಕು ಒಂದು ಸಂಸ್ಥೆಯ ಬೇರೆ ಬೇರೆ ಕಾಲೇಜುಗಳಿಗೆ ಒಂದೇ ಸ್ಥಳದಲ್ಲಿ ಇದ್ದರೆ, ಅಂತಹ ಕಾಲೇಜುಗಳಿಗೆ ಒಂದೇ ಸಮಿತಿ ನಿಯೋಜಿಸಬೇಕು ಎಂದು ಸದಸ್ಯರು ನೀಡಿದ. ಸಲಹೆಗೆ ಕುಲಪತಿಗಳ ಒಪ್ಪಿಗೆ ಸೂಚಿಸಿ ಅದರಂತೆ ಕ್ರಮವಹಿಸಲಾಗುವುದು ಎಂದು ಹೇಳೀದರು.

ವಿಷಯ ಸಂಖ್ಯೆ: 02

Sub: Reports of the Review and Evaluation Committee constituted for assessment of Autonomous Colleges of BCU for the Academic year 2020-21 and 2021-22.

Ref: Notification No:BCU/01/ACA/Auto-Review/56,58,60,64,66,68,70/2023-24 dt. 27.06.2023.

**Reference Note:**

The Syndicate has considered the proposal by online circulation for Constitution of Expert Committees on 20.06.2023 to Review and Evaluation Committees for verification of the performance of Autonomous Colleges and to Extension of Autonomous Status. Accordingly eight Committees were constituted under the Chairmanship of Vice-Chancellor vide notification referred above.

The said Committees have visited the following seven Autonomous Colleges on 4th & 5th July, 2023 and submitted the reports for the Academic Year 2020-21 & 2021-22. The details are as under:

| Sl. No. | Name of the Autonomous | Year of Review & Purpose | Date of visit |
|---|---|---|---|
| **1.** | **The National College (Autonomous) Basavanagudi, Pampa mahakavi road, Bengaluru** | **a) Review for 2020-21 & 2021-22<br>b)Inspection as per Govt. letter for Extension of Autonomous Status<br>c) Additional Intake for BCA** | **04.07.2023** |
| | RECOMMENDATIONS:<br>i. The Committee after going through the details and after verification of the infrastructure and facilities available has satisfied with availability of necessary infrastructure as per the provision of UGC Regulations. The Committee recommends to the Govt. to issue concurrence to the UGC approval for extension of Autonomous Status.<br>ii. The Committee after evaluation satisfied itself and recommends the performance of the College for years 2020-21 & 2021-22 as satisfactory, subject to fulfilment of the observations made by the Committee.<br>iii. The Committee recommends to increase intake of admission for BCA course from the 120 seats to 180 seats (60- one section). | | |

| | | | |
|---|---|---|---|
| **2.** | **BMS College for Women, Basavanagudi, Bengaluru-560004** | **a) Review for 2021-22**<br>**b)Additional Intake for BCA** | **04.07.2023** |
| | RECOMMENDATIONS:<br>i. The Committee after evaluation of the performance of college, recommends that the performance of the College for year 2021-22 is satisfactory and the college shall fulfil all the observations made by the Committee.<br>ii. The Committee recommends to increase the intake of admission for BCA course from the 120 seats to 180 seats (60- one section). | | |
| **3.** | **R.V. Institute of Management**<br>**C.A -17 36 Cross, 26th Main Road, 4th 'T' Block, Jayanagar, Bengaluru-560041** | **a) Review for 2021-22** | **04.07.2023** |
| | RECOMMENDATIONS:<br>i. The Committee after evaluation of the College for year 2021-22 recommends that the performance of the College is satisfactory and the college shall comply with the observations made by the Committee.<br>ii. The Committee recommends tostart new PG Diploma in Business Analytics with an intake of 60 seats subject to payment of additional prescribed fees. | | |
| **4.** | **St. Joseph's College of Commerce (Autonomous), No. 163, Brigade Road, Bengaluru-560025** | **a) Review 2020-21 & 2021-22**<br>**b) Starting of New Courses** | **05.07.2023** |
| | RECOMMENDATIONS:<br>i. The Committee after evaluation of the performance of college recommends for extension and the performance of the College for year 2020-21 and 2021-22 is found satisfactory.<br>ii. The College shall fulfil all the observations made by the Committee.<br>iii. The Committee recommends to approve starting the following courses:<br>a. B.Sc. Economics (Honours) with Psychology - 4 years programme intake-60<br>b. B. A. English (Honours) with Psychology Minor – 4 years intake-80. | | |
| **5.** | **Mount Carmel College (Autonomous), Palace Road, Vasanth Nagar, Bengaluru-560052** | **a) Review 2020-21 & 2021-22**<br>**b) New Courses**<br>**c) Change of Nomenclature of the Course**<br>**d) Additional intake BCA** | **05.07.2023** |

RECOMMENDATIONS:

1. The Committee after evaluation of the performance of college recommends that the performance of the College for year 2020- 21 & 2021-22 is satisfactory.

2. The College shall fulfil all the observations made by the Committee.

3. The Committee recommends to approve starting the following courses:

A. Single discipline programme

| Program | Student Intake |
|---|---|
| B.A. Journalism & Mass Communication | 40 |
| B.A. Sports Management | 40 |
| B.Sc. Biotechnology | 40 |
| B.Sc. Data Science | 40 |

B. Dual discipline programme

| Program | Student Intake |
|---|---|
| B.Sc. Microbiology, Zoology | 40 |
| B.Sc. Environmental Science & Sustainability, Life Sciences | 40 |
| PGD in Management Analytics | 30 |

C. Change in the nomenclature of the existing programs.

| Program | Proposed Change |
|---|---|
| BA Communication. Studies | BA Communication & Media |

D. Additional intake of the following program:

| Program | Existing Intake | Proposed additional intake | Total |
|---|---|---|---|
| BCA | 60 | 60 | 120 |

| | | | |
|---|---|---|---|
| 6. | **Maharani Lakshmi Ammanni College for Women (Autonomous), Malleshwaram, Bengaluru** | **a) Review 2020-21 & 2021-22**<br>**b) New Courses** | **05.07.2023** |

RECOMMENDATION:

1. The Committee after evaluation of the performance of college recommends for extension and the performance of the College for year 2020-21 and 2021-22 is found satisfactory.

2. The College shall fulfil all the observations made by the Committee.
3. The Committee recommends to approve starting the following courses:

| Under Graduate Programmes | | Intake |
|---|---|---|
| 1 | B.Sc. Genetics | 40 |
| 2 | B.Sc. Data Science | 40 |
| 3 | B.A. Visual Communication | 40 |
| 4 | B.Com. Data Analytics | 60 |
| Post Graduate Programmes | | |
| 1 | M.Sc. Zoology | 30 |
| 2 | M.Sc. Analytical | 30 |
| 3 | M.Sc. Computer Science | 30 |
| 4 | M.A. Mass Communication & Journalism | 30 |

Rekha.V

| 7 | **Presidency College Kempapur, Hebbala, Bengaluru-560024** | **a) Review 2020-21 & 2021-22**<br>**b) New Courses**<br>**c) Enhancement fo Intake** | **05.07.2023** |
|---|---|---|---|

RECOMMENDATION:

1. The Committee after evaluation of the performance of college, recommends that the performance of the College for year 2021-22 is satisfactory and the college shall fulfil all the observations made by the Committee.
2. The Committee recommends for staring of New Courses and Enhancement of intake as follows:

| Sl.No. | **New Course** | Intake |
|---|---|---|
| 1. | B.Sc. Mathematics | 60 |
| 2. | B.Sc. Computer Science | 60 |
| | **Enhancement of Intake** | |
| 3. | BCA | Enhancement from 200 to 300 |
| 4. | MCA | Enhancement from 180to 300<br>**subject to NoC from State Govt. & approval of AICTE** |
| 5. | MBA | Enhancement from 300 to 360<br>**subject to NoC from State Govt. & approval of AICTE** |

| 8. | **Jyoti Nivas College (Autonomous), Kormangala, Bengaluru** | **a) Review 2020-21 & 2021-22**<br>**b) New Courses**<br>**c) Enhancement of Intake** | **11.07.2023** |
|---|---|---|---|

RECOMMENDATION:

1. The Committee after evaluation of the performance of college recommends that the performance of the College for year 2020-21 & 2021-22 is satisfactory.
2. The College shall fulfil all the observations made by the Committee.
3. The Committee recommends to approve starting the following courses:

| **Program** | **Student Intake** |
|---|---|
| B.A. English Literature | 50 |
| B.A Visual Communication | 50 |
| B.Sc. Psychology | 50 |
| B.Sc. Rehabilitation Science with Psychology & Sociology | 50 |
| P.G Programme | |
| M.Com | 40 |
| M.Sc. Mathematics | 30 |
| M.Sc. Biological Science | 30 |
| M.Sc. Wellness Counselling | 30 |
| M.Sc. Psychology | 30 |
| M.Sc. Computer Science | 30 |
| Enhancement of Intake | |
| BCA | 50 seats to 110 seats (60- one section) |
| BBA | 60 seats to 120 seats (60- one section) |

The reports of the Review and Evaluation Committee for verification of the performance of Autonomous Colleges and to Extension of Autonomous Status are placed before the Academic Council for consideration and approval.

<u>ವಿದ್ಯಾವಿಷಯಕ ಪರಿಷತ್ ನಿರ್ಣಯ:</u>

ಕೆಳಕಂಡ ಎಂಟು ಸ್ವಾಯತ್ತ ಮಹಾವಿದ್ಯಾಲಯಗಳಿಗೆ ಭೇಟಿ ನೀಡಿದ ತಜ್ಞರ ಸಮಿತಿ ಸಲ್ಲಿಸಿದ ವರದಿಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

| Sl. No. | Name of the Autonomous | Year of Review & Purpose | Date of visit |
|---|---|---|---|
| 1. | The National College (Autonomous) Basavanagudi, Pampa mahakavi road, Bengaluru | a) Review for 2020-21 & 2021-22<br>b)Inspection as per Govt. letter for Extension of Autonomous Status<br>c) Additional Intake for BCA | 04.07.2023 |
| 2. | BMS College for Women, Basavanagudi, Bengaluru-560004 | a) Review for 2021-22<br>b)Additional Intake for BCA | 04.07.2023 |
| 3. | R.V. Institute of Management C.A -17 36 Cross, 26th Main Road, 4th 'T' Block, Jayanagar, Bengaluru-560041 | a) Review for 2021-22 | 04.07.2023 |
| 4. | St. Joseph's College of Commerce (Autonomous), No. 163, Brigade Road, Bengaluru-560025 | a) Review 2020-21 & 2021-22<br>b) Starting of New Courses | 05.07.2023 |
| 5. | Mount Carmel College (Autonomous), Palace Road, Vasanth Nagar, Bengaluru-560052 | a) Review 2020-21 & 2021-22<br>b) New Courses<br>c) Change of Nomenclature of the Course<br>d) Additional intake BCA | 05.07.2023 |
| 6. | Maharani Lakshmi Ammanni College for Women (Autonomous), Malleshwaram, Bengaluru | a) Review 2020-21 & 2021-22<br>b) New Courses | 05.07.2023 |
| 7. | Presidency College Kempapur, Hebbala, Bengaluru-560024 | a) Review 2020-21 & 2021-22<br>b) New Courses<br>c) Enhancement fo Intake | 05.07.2023 |
| 8. | Jyoti Nivas College, Koramangala, Bengaluru | a) Review 2020-21 & 2021-22<br>b) New Courses<br>c) Enhancement fo Intake | 11.07.2023 |

ತಜ್ಞರ ಸಮಿತಿಗಳು ಮಾಡಿದ ಶಿಫಾರಸ್ಸುಗಳಿಗೆ ಸರ್ವಾನುಮತದ ಅನುಮೋದನೆ ನೀಡಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲು ವಿದ್ಯಾವಿಷಯಕ ಪರಿಷತ್ ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ: 03

Sub: Reports of the Expert Committee for Recognition of Institutes for Specified/Specialized Studies as per the Statutes of the Bangalore University in respect of MOMSOON Academy Ltd.,

Ref: Notification No:BCU/Syn/Spl.Sub/62/2023-24 dated.27.06.2023

**Reference Note:**

The Syndicate of the Bengaluru City University has adopted the Statutes of Bangalore University relating to the Recognition of certain Institutions for Specified/Specialized Studies and Research-2018 vide Syndicate Resolution held n 13.08.2021. Accordingly, the MOMSOON Academy Pvt., Ltd, #60/62, 2nd Floor, 8th B Main, Jayanagar 4th Block, Bengaluru has applied recognition of institution for Specialized Studies to offer:

a. M.Sc. in Clinical Embryology & Reproductive Biology
b. Post Graduate Diploma in Clinical Embryology & Assisted Reproductive Technology

An Expert Committee was constituted to consider the proposal on 27.06.2023. The Committee visited the Institute on 04.07.2023 and verified the infrastructure and other facilities available with the institution. After verification, the Expert Committee submitted the reports.

**Institute of Specified Studies / Specialized Studies and Research – Fresh Recognition**

<table>
<tr><th>Sl. No.</th><th>Name of the Institute</th><th>Date of Visit</th></tr>
<tr><td>1.</td><td>Momsoon Academy Pvt. Ltd<br>#60/62, 2nd Floor, 8th B Main, Jayanagar, 4th Block, Bengaluru-560011</td><td>04.07.2023</td></tr>
<tr><td></td><td colspan="2">RECOMMENDATIONS:<br>The Committee unanimously recommends for Recognition of MOMSOON Academy Pvt. Ltd. # 60/62, 2nd Floor, 8th B Main, Jayanagar 4th Block, Bangalore 560011 as a Recognized Institute for Specialized Studies to offer:<br>a) M.Sc. in Clinical Embryology & Reproductive Biology – intake 30<br>b) Post Graduate Diploma in Clinical Embryology & Assisted Reproductive Technology – intake 20<br>for a period of five years from the year of granting permission subject to fulfilment of conditions stipulated and adhering to the provisions/conditions of the "Bengaluru University's Recognition of Certain Institutions for Specified Studies/Specialized Studies and Research Statutes-2018," adopted by BCU, UGC Regulations/amendments and directions of the Government of Karnataka issued from time to time.</td></tr>
</table>

The report of the committee is placed before Academic Council for consideration.

ವಿದ್ಯಾವಿಷಯಕ ಪರಿಷತ್ ತೀರ್ಮಾನ:

**Momsoon Academy Pvt. Ltd** ನವರು ವಿಶ್ವವಿದ್ಯಾನಿಲಯ ಅಳವಡಿಸಿಕೊಂಡಿರುವ ಬೆಂಗಳೂರು ವಿಶ್ವವಿದ್ಯಾಲಯದ **"Recognition of Certain Institutions for Specified Studies/Specialized Studies and Research Statutes-2018,"** ರಲ್ಲಿ ನಿಗದಿಪಡಿಸಿರುವ ಷರತ್ತು ಹಾಗೂ ನಿಬಂಧನೆಗಳು ಹಾಗೂ ತಜ್ಞರ ಸಮಿತಿ ವಿಧಿಸಿರುವ ಷರತ್ತುಗಳಿಗೆ ಒಳಪಟ್ಟು **Momsoon Academy Pvt. Ltd** ಸಂಸ್ಥೆಗೆ **M.Sc. in Clinical Embryology & Reproductive Biology** ಮತ್ತು **Post Graduate Diploma in Clinical Embryology & Assisted Reproductive Technology** ಕೋರ್ಸ್‌ಗಳಿಗೆ ಮಾನ್ಯತೆ ನೀಡುವ ಕುರಿತು ಅಗತ್ಯ ಕ್ರಮವಹಿಸಲು ವಿದ್ಯಾವಿಷಯಕ ಪರಿಷತ್ ಸಭೆ ಸಹಮತ ವ್ಯಕ್ತಪಡಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು.

ಕುಲಸಚಿವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು
ಸಭಾಧ್ಯಕ್ಷರು

Lokesh. G

ಕುಲಸಚಿವರು
ಸದಸ್ಯಕಾರ್ಯದರ್ಶಿಗಳು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ